# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 63(569) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗದಗ ಬೆಟಗೇರಿ ನಗರಕ್ಕೆ ಒಳಚರಂಡಿ ಯೋಜನೆಯ ಮೊದಲನೇ ಹಂತದ ಯೋಜನೆ ಯಾವಾಗ ಪ್ರಾರಂಭವಾಯಿತು; ಮುಕ್ತಾಯಕ್ಕೆ ನಿಗದಿಪಡಿಸಿದ ಅವಧಿ ಎಷ್ಟು; ಮಂಜೂರಾದ ಅನುದಾನ ಎಷ್ಟು; (ವಿವರವಾದ ಮಾಹಿತಿ ನೀಡುವುದು) | ಗದಗ ಬೆಟಗೇರಿ ನಗರಕ್ಕೆ ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು ದಿನಾಂಕ:28.11.2003 ರಂದು ಪ್ರಾರಂಭಿಸಲಾಯಿತು. ಸದರಿ ಯೋಜನೆಯ ಮುಕ್ತಾಯಕ್ಕೆ 12 ತಿಂಗಳನ್ನು ನಿಗಧಿಪಡಿಸಲಾಗಿತ್ತು. ಈ ಯೋಜನೆಗೆ ರೂ.1114.66 ಲಕ್ಷಗಳನ್ನು ಮಂಜೂರು ಮಾಡಲಾಗಿತ್ತು. ನಂತರದಲ್ಲಿ ರೂ.1494.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು. |
| ಆ) | ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡು ಕಾರ್ಯಾರಂಭ ಮಾಡಿದೆಯೇ; ಹಾಗಿದ್ದಲ್ಲಿ ಮೊದಲನೇ ಹಂತದ ಯೋಜನೆಯಲ್ಲಿ ಎಷ್ಟು ಮನೆಗಳಿವೆ ಮತ್ತು ಅವುಗಳಿಗೆ ಯುಜಿಡಿ ಸಂಪರ್ಕ ಕಲ್ಪಿಸಲಾಗಿದೆಯೇ? (ವಿವರವಾದ ಮಾಹಿತಿ ನೀಡುವುದು) | ಮೊದಲನೇ ಹಂತದ ಕಾಮಗಾರಿಗಳನ್ನು ದಿನಾಂಕ:30.03.2016 ರಂದು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ.<br><br>ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಮೂಲ ಅಂದಾಜು ಪಟ್ಟಿಯಲ್ಲಿ ಹಾಗೂ ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಒಳಚರಂಡಿ ಗೃಹ ಸಂಪರ್ಕ ಜೋಡಣೆಗೆ ಅವಕಾಶ ಕಲ್ಪಿಸಿರುವುದಿಲ್ಲ. ಮನೆಗಳ ತ್ಯಾಜ್ಯ ನೀರು ಕೊಳವೆಗಳ ಒಳಚರಂಡಿ ಜಾಲಕ್ಕೆ ಜೋಡಿಸುವ ಕಾಮಗಾರಿಯನ್ನು ನಗರ ಸಭೆಯಿಂದ ಸೂಕ್ತ ಸಮಯದಲ್ಲಿ ಕಲ್ಪಿಸದೆ ಇರುವುದರಿಂದ ಕೊಳವೆಗಳಲ್ಲಿ ತ್ಯಾಜ್ಯ ನೀರಿನ ಹರಿವು ಇಲ್ಲವಾಗಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಕಾರ್ಯವು ಸ್ಥಗಿತಗೊಂಡಿರುತ್ತದೆ.<br><br>ತದನಂತರದಲ್ಲಿ ನಗರಸಭೆ ಗದಗ-ಬೆಟಗೇರಿ ವತಿಯಿಂದ ಹಂತ ಹಂತವಾಗಿ ಸುಮಾರು 13,272 ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸಲಾಗಿದೆ. |

| | | |
|---|---|---|
| ಇ) | ಯು.ಜಿ.ಡಿ 2ನೇ ಹಂತದ ಕಾಮಗಾರಿ ಯಾವಾಗ ಪ್ರಾರಂಭವಾಗಿದೆ ಮತ್ತು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು ಮಂಜೂರಾದ ಹಣ ಎಷ್ಟು; | ಕೇಂದ್ರ ಪುರಸ್ಕೃತ ಅಮೃತ್ 1.0 ಯೋಜನೆಯಡಿ 2ನೇ ಹಂತದ ಒಳಚರಂಡಿ ಕಾಮಗಾರಿಯನ್ನು ದಿನಾಂಕ:17.10.2016 ರಂದು ಪ್ರಾರಂಭಿಸಲಾಗಿದ್ದು, ಸದರಿ ಕಾಮಗಾರಿಯನ್ನು 36 ತಿಂಗಳೊಳಗೆ ಪೂರ್ಣಗೊಳಿಸಲು ಕಾಲಾವಧಿಯನ್ನು ನಿಗದಿಪಡಿಸಲಾಗಿತ್ತು. ಈ ಯೋಜನೆಗೆ ರೂ.151.56 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ನಿಗದಿಪಡಿಸಲಾದ ಕಾಲಾವಧಿಯಂತೆ ಸದರಿ ಕಾಮಗಾರಿಯನ್ನು ದಿನಾಂಕ:16.10.2019 ರಂದು ಪೂರ್ಣಗೊಳಿಸಬೇಕಾಗಿತ್ತು. ಆದರೆ ವಾಸ್ತವಿಕವಾಗಿ ಸದರಿ ಕಾಮಗಾರಿಯನ್ನು ದಿನಾಂಕ:31.07.2021 ರಂದು ಪೂರ್ಣಗೊಳಿಸಲಾಗಿದೆ. |
| ಈ) | ಎರಡನೇ ಹಂತದ ಅಮೃತ ಯೋಜನೆಗೆ ಬರುವ ಮನೆಗಳು ಎಷ್ಟು ಮತ್ತು ಅದರಲ್ಲಿ ಎಷ್ಟು ಮನೆಗಳಿಗೆ ಸಂಪರ್ಕ ಒದಗಿಸಲಾಗಿದೆ; (ಮಾಹಿತಿ ನೀಡುವುದು) | ಎರಡನೇ ಹಂತದ ಅಮೃತ ಯೋಜನೆಗೆ 44,447 ಮನೆಗಳು ಬರಲಿದ್ದು, ಈ ಪೈಕಿ ಒಟ್ಟು 28,160 ಮನೆಗಳಿಗೆ ಮಾತ್ರ ಗೃಹ ಸಂಪರ್ಕಗಳನ್ನು ನೀಡಲಾಗಿರುತ್ತದೆ. 13,272 ಮನೆಗಳಿಗೆ ಈಗಾಗಲೇ ನಗರಸಭೆ ವತಿಯಿಂದ ಗೃಹ ಸಂಪರ್ಕವನ್ನು ನೀಡಲಾಗಿದೆ. |
| ಉ) | ಮೊದಲನೇ ಹಾಗೂ ಎರಡನೇ ಹಂತದ ಯೋಜನೆಗಳು ಯಶಸ್ವಿಯಾಗಿ ಆಗಿರುವುದಿಲ್ಲ ಎಂಬ ಆರೋಪಗಳಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣಗಳೇನು; (ವಿವರ ನೀಡುವುದು) | ಮೊದಲನೇ ಹಂತದ ಒಳಚರಂಡಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ದಿನಾಂಕ:30.03.2016 ರಂದು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ. ಸದರಿ ಯೋಜನೆಯಲ್ಲಿ ಗೃಹ ಸಂಪರ್ಕ ಕಲ್ಪಿಸಲು ಅವಕಾಶವಿರುವುದಿಲ್ಲ. ನಗರಸಭೆಯು ನಿಗದಿತ ಶುಲ್ಕ ಭರಿಸಿಕೊಂಡು ಗೃಹ ಸಂಪರ್ಕ ಕಲ್ಪಿಸದಿದ್ದರಿಂದ ತ್ಯಾಜ್ಯ ನೀರು ಹರಿಯದೇ ಮೊದಲನೆಯ ಹಂತದ ಘಟಕಗಳು ಸ್ಥಗಿತಗೊಂಡಿದ್ದವು. ನಂತರ ನಗರಸಭೆಯ ವತಿಯಿಂದ ಹಂತ ಹಂತವಾಗಿ ಸುಮಾರು 13,272 ಮನೆಗಳಿಗೆ ಗೃಹ ಸಂಪರ್ಕಗಳನ್ನು ನೀಡಿರರುವುದರಿಂದ ಸದರಿ ಯೋಜನೆಯ ಕೊಳವೆ ಮಾರ್ಗಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುತ್ತವೆ.<br>ಎರಡನೇ ಹಂತದ ಒಳಚರಂಡಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ದಿನಾಂಕ:30.07.2021 ರಂದು ಯಶಸ್ವಿಯಾಗಿ ಪೂರ್ಣಗೊಳಿಸಿ ಚಾಲನೆ ಗೊಳಿಸಲಾಗಿರುತ್ತದೆ. ಸದರಿ ಯೋಜನೆಯಡಿ 28,160 ಗೃಹ ಸಂಪರ್ಕಗಳನ್ನು ನೀಡಲಾಗಿರುತ್ತದೆ. |

| | | |
|---|---|---|
| | | ಪ್ರಸ್ತುತ ಎರಡೂ ಯೋಜನೆಗಳಿಂದ ನೀಡಲಾಗಿರುವ ಗೃಹ ಸಂಪರ್ಕಗಳಿಂದ 13.88 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಹರಿದು ಬರುತ್ತಿದ್ದು ದಿನಂಪ್ರತಿ ಸರಾಸರಿ 7.0 ರಿಂದ 8.0 ದಶಲಕ್ಷ ಲೀಟರ್ ತ್ಯಾಜ್ಯ ನೀರನ್ನು ಸಂಸ್ಕರಿಸಲಾಗುತ್ತಿದೆ. |
| **ಊ)** | ಮೇಲ್ಕಂಡ ಯೋಜನೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಗೊಳ್ಳಲು ಮುಂದಿನ ದಿನಗಳಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ? (ವಿವರ ನೀಡುವುದು) | ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಜಲಶುದ್ಧಿ ಅಭಿಯಾನ (ಬಳಸಿದ ನೀರು ನಿರ್ವಹಣೆ)ದ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಪರಿಸರ ಪರಿಹಾರ ನಿಧಿಯಡಿ ಗದಗ-ಬೆಟಗೇರಿ ನಗರಕ್ಕೆ ರೂ.3000.00 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಸದರಿ ಅನುದಾನದಡಿ ಹಾಲಿ ಚಾಲ್ತಿಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣ ಘಟಕದ ಉನ್ನತೀಕರಣ ಯೋಜನೆ ಕೈಗೊಳ್ಳಲು ಹಾಗೂ ಸುಮಾರು 5 ಕಿ.ಮೀ. ಬಿಟ್ಟು ಹೋದ ಒಳಚರಂಡಿ ಜಾಲಗಳ ಸಂಪರ್ಕ ಒದಗಿಸುವ ಕಾಮಗಾರಿಯ ಅಂತಿಮ ಯೋಜನಾ ವರದಿ ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

ಸಂಖ್ಯೆ : ನಅಇ 11 ಯುಎಂಎಸ್ 2025

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು